## ದಿನಾಂಕ:27-11-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 8 (140)/2010-11**

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಪರಿಷತ್ ವತಿಯಿಂದ ಇದುವರೆವಿಗೂ ಐದು ಜಿಲ್ಲಾ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದ್ದು, ಇದೀಗ 6ನೇ ಸಾಹಿತ್ಯ ಸಮ್ಮೇಳನವನ್ನು 2010 ರ ಸೆಪ್ಟೆಂಬರ್ 3, 4 ಮತ್ತು 5 ರಂದು ಒಟ್ಟು ಮೂರು ದಿನಗಳು ಬೆಂಗಳೂರು ನಗರದ ರವೀಂದ್ರ ಕಲಾ ಕ್ಷೇತ್ರದಲ್ಲಿ ಆಯೋಜಿಸಿ, ಕನ್ನಡಿಗರಲ್ಲಿ ಜಾಗೃತಿ ಉಂಟು ಮಾಡುವ ಹಾಗೂ ನಗರದಲ್ಲಿರುವ ಅನ್ಯಭಾಷಿಕರಲ್ಲಿ ಕನ್ನಡದ ಬಗ್ಗೆ ಒಲವು ಮೂಡಿಸುವ ದಿಸೆಯಲ್ಲಿ ಹಮ್ಮಿಕೊಂಡಿರುವ ಈ ಸಮ್ಮೇಳನಕ್ಕೆ ಅಂದಾಜು ರೂ.27 ಲಕ್ಷಕ್ಕೂ ಹೆಚ್ಚು ಹಣ ಖರ್ಚಾಗಿರುವುದಾಗಿ ತಿಳಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕನಿಷ್ಠ ರೂ.10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಬೇಕೆಂದು ಪೂಜ್ಯ ಮಹಾಪೌರರನ್ನು ಕೋರಿದ್ದು, ಪೂಜ್ಯ ಮಹಾಪೌರರು ಸದರಿ ಸಮ್ಮೇಳನಕ್ಕೆ ಸೂಕ್ತ ಅನುದಾನ ಒದಗಿಸಲು ತಿಳಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿ ಹಾಗೂ ಪಾಲಿಕೆ ಸಭೆಯ ಆದ್ಯ ಗಮನಕ್ಕೆ, ಪ್ರಸ್ತಾಪಿತ ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕ ಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ಬೆಂಗಳೂರು ನಗರ ಜಿಲ್ಲಾ 6ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪ್ರಸಕ್ತ ಸಾಲಿಗೆ ರೂ.3,30,000/- ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ತೀರ್ಮಾನ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-10-2010 ರ ಟಿಪ್ಪಣಿ ಹಾಗೂ ಆಯುಕ್ತರ ದಿನಾಂಕ:11-10-2010ರ ಟಿಪ್ಪಣಿಯನ್ನು ರೂ.7.00 ಲಕ್ಷಗಳ ಸಹಾಯಧನ ಮಂಜೂರು ಮಾಡುವ ಮಾರ್ಪಾಡಿನೊಂದಿಗೆ ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

Dhayanand.N

(ಎನ್.ದಯಾನಂದ್)
ಉಪ ಮಹಾಪೌರರು